## Government Schools and Junior Colleges in Buntwai Taluk

412. SRI B.V. KAKKILAYA (Vittal).—Will the Minister for Education be pleased to state :—

(a) the No. of Government Lower Primary, Higher Primary and Secondary Schools and Junior Colleges in Buntwal taluk (S. K. District);

(b) the total No. of students enrolled in each category in the year 1977-78;

(c) the total No. of teachers and Lecturers working in each category in the year 1977-78;

(d) the No. of posts of teachers and lecturers remaining vacant ;

(e) the No. of teachers and lecturers required as per the ratio 1 : 4 and the No. of teachers and lecturers appointed in 1977-78 ?

SRI B. SUBBAYYA SHETTY (Minister for Education).—

(a)—

| Lower Primary | Higher Primary | Secondary | Junior Colleges |
|---|---|---|---|
| 1 | 2 | 3 | 4 |
| 58 | 74 | 1 | 3 |
| (b)— | | | |
| 4459 | 18106 | 62 | 1289 |
| (c)— | | | |
| 90 | 325 | 2 | 44 |
| (d)— | | | |
| 14 | 35 | 2 | — |
| (c) Total No. teachers and Lecturers required. | | | |
| 111 | 453 | 2 | 32 |
| No. of teachers and Lecturers appointed during 1977-78. | | | |
| Nil | Nil | Nil | Nil |

ಶ್ರೀ ಬಿ.ವಿ. ಕಕ್ಕಿಲಾಯ.— ಸ್ವಾಮಿ, ತಮ್ಮ ಉತ್ತರದಲ್ಲಿ ಕಿರಿಯ ಪ್ರೈಮರಿ ಶಾಲೆಗಳಲ್ಲಿ ೧೧೧ ಮಂದಿ ಉಪಾಧ್ಯಾಯರು ಉನ್ನತ ಪ್ರಾಥಮಿಕ ಶಾಲೆಗಳಲ್ಲಿ ೪೫೩ ಮಂದಿ ಉಪಾಧ್ಯಾಯರು, ಸೆಕೆಂಡರಿಯಲ್ಲಿ ೨ ಮಂದಿ ಉಪಾಧ್ಯಾಯರು ಮತ್ತು ಜೂನಿಯರ್ ಕಾಲೇಜುಗಳಲ್ಲಿ ೩೨ಮಂದಿ ಉಪಾಧ್ಯಾಯರುಗಳು– ಇಷ್ಟು ಮಂದಿ ಉಪಾಧ್ಯಾಯರುಗಳ ಅವಶ್ಯಕತೆ ಇದೆಯೆಂದು ಹೇಳಿದ್ದೀರಿ. ಇಷ್ಟು ವೇಕೆನ್ಸಿ ಇದ್ದರೂ ಕೂಡ ೧೯೭೭–೭೮ನೇ ಸಾಲಿನಲ್ಲಿ ಈಗ ಇರತಕ್ಕಂಥ ಕೆಟೂಗೊರಿಯಲ್ಲಿ ಒಬ್ಬರನ್ನೂ ರೆಕ್ರೂಟ್ ಮೆಂಟ್ ಮಾಡಿಲ್ಲ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಉಪಾಧ್ಯಾಯರುಗಳ ಅವಶ್ಯಕತೆ ಇರುವಾಗ ಅವರನ್ನು ಅಲ್ಲಿ ರೆಕ್ರೂಟ್‌ಮೆಂಟ್ ಮಾಡದೇ ಇರುವುದಕ್ಕೆ ಕಾರಣ ಏನು ? ಯಾವಾಗ ತಾವು ಅವರನ್ನು ರೆಕ್ರೂಟ್ ಮಾಡುತ್ತೀರಿ.

ಶ್ರೀ ಬಿ. ಸುಬ್ಬಯ್ಯಶೆಟ್ಟಿ.— (೧) ಪ್ರಶ್ನೆಯಲ್ಲಿ ತಾವು ಕೇಳಿರುವುದಕ್ಕೆ ನಾನು ಉತ್ತರ ಕೊಟ್ಟಿರುವುದು Total no. of teachers and lecturers required, and No. of teachers and lecturers appointed ಹಾಗೆ ಇದೆ ಅಷ್ಟೆ. ಈಗಾಗಲೇ ನಾವು ರೆಕ್ರೂಟ್‌ಮೆಂಟ್ ಮಾಡುತ್ತಿದ್ದೇವೆ.

ಶ್ರೀ ಬಿ.ವಿ. ಕಕ್ಕಿಲಾಯ.— ಸ್ವಾಮಿ, ನನ್ನ ಪ್ರಶ್ನೆ (ಸಿ) ಗೆ ಉತ್ತರವಾಗಿ ಎಷ್ಟು ಉಪಾಧ್ಯಾಯರು ಪ್ರತಿವರ್ಗದಲ್ಲಿ ಕೆಲಸಮಾಡುತ್ತಿದ್ದಾರೆ ಎಂಬುದನ್ನು ತಾವು ಹೇಳಿದ್ದೀರಿ. ಇನ್ನೂ ಖಾಲಿ ಇರತಕ್ಕ ಜಾಗಗಳಿಗೆ ನೇಮಕ ಮಾಡಬೇಕಾಗಿದೆ. ಸೆಕೆಂಡರಿ ಶಾಲೆಯಲ್ಲಿ ಇದು ಸಮ ಸಂಖ್ಯೆಯಲ್ಲಿ ಇದೆ. ಈಗ ತಾವು ಹೇಳಿರುವ ಪ್ರಕಾರ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ೧೪ ಜನ, ಉನ್ನತ ಪ್ರಾಥಮಿಕ ಶಾಲೆಯಲ್ಲಿ ೩೫ ಜನ, ಸೆಕೆಂಡರಿಯಲ್ಲಿ ೨ ಜನ– ಇಷ್ಟು ಉಪಾಧ್ಯಾಯರುಗಳ ಹುದ್ದೆಗಳು ಖಾಲಿ ಇದ್ದು ಅಷ್ಟು ಜನರನ್ನು ನೇಮಕ ಮಾಡಬೇಕಾಗಿದೆ. ಇವರನ್ನು ನೇಮಕ ಮಾಡುವುದರಲ್ಲಿ ತಾವು ನಿಧಾನ ಮಾಡುತ್ತಿದ್ದೀರಿ. ಆದಷ್ಟು ಜಾಗ್ರತೆ ಇವರನ್ನು ನೇಮಕ ಮಾಡುವುದಕ್ಕೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಬಿ. ಸುಬ್ಬಯ್ಯಶೆಟ್ಟಿ.— ಈಗ ಡಿಸ್ಟ್ರಿಕ್ಟ್ ಲೆವಲ್ ಪ್ರೈಮರಿ ಸ್ಕೂಲ್ ಟೀಚರ್ಸ್ ಯಾರಿದ್ದಾರೆ ಅವರನ್ನು ಡಿಸ್ಟ್ರಿಕ್ಟ್ ಲೆವಲ್ ರೆಕ್ರೂಟ್‌ಮೆಂಟ್ ಕಮಿಟಿಯವರು ಈಗಾಗಲೇ ನೇಮಕ ಮಾಡುತ್ತಿದ್ದಾರೆ. ಈ ಸೆಕೆಂಡರಿ ಸ್ಕೂಲ್ ಟೀಚರ್ಸ್ ಬಗ್ಗೆ ಪಬ್ಲಿಕ್ ಸರ್ವೀಸ್ ಕಮಿಷನ್‌ನವರು ಈಗಾಗಲೇ ಇಂಟರ್‌ವ್ಯೂ ಮಾಡುತ್ತಿದ್ದಾರೆ. ಅವರಿಂದ ಪಟ್ಟಿ ಬಂದತಕ್ಷಣ ಅವರನ್ನು ಕೊಡಲೇ ಅಲ್ಲಿಗೆ ಪೋಸ್ಟ್ ಮಾಡುತ್ತೇವೆ. ಆಮೇಲೆ regarding other additional posts required as per the ratio ಇದು ಜಾಸ್ತಿ ಸಂಖ್ಯೆಯಲ್ಲಿ ಇದೆ. It is for consideration in due course.

ಶ್ರೀ ಬಿ.ವಿ. ಕಕ್ಕಿಲಾಯ.—ಸ್ವಾಮಿ, ಇನ್ನೊಂದು ವಿಚಾರವನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. ನಮ್ಮ ಬಂಟವಾಳ ತಾಲ್ಲೂಕಿನಲ್ಲಿ ಒಂದು ಶಾಲೆ ಇದೆ. ಆ ಶಾಲೆಯಲ್ಲಿ ೫ ಜನ ಅಧ್ಯಾಪಕರು ಇರಬೇಕು; ಆದರೆ ಅಲ್ಲಿ ೪ ಜನ ಅಧ್ಯಾಪಕರು ಇದ್ದಾರೆ. ಅದರಲ್ಲಿ ಒಬ್ಬರನ್ನು ಡೆಪ್ಯುಟೇಷನ್ ಮೇಲೆ ಬೇರೊಂದು ಶಾಲೆಗೆ ಹಾಕಿದ್ದಾರೆ. ಹೀಗಾಗಿ ಅಲ್ಲಿ ಎಷ್ಟು ಸಂಖ್ಯೆಯಲ್ಲಿ ಅಧ್ಯಾಪಕರು ಇರಬೇಕಾಗಿತ್ತೋ ಅಷ್ಟು ಸಂಖ್ಯೆಯಲ್ಲಿ ಇಲ್ಲ, ಇದನ್ನು ಸರಿಪಡಿಸುವುದಕ್ಕೆ ತಾವು ಪ್ರಯತ್ನಪಡುತ್ತೀರಾ ?

SRI B. SUBBAYYA SHETTY.— I thank the hon. member for the information. I will definitely look into the matter.

ಶ್ರೀ ಬಿ.ವಿ. ಕಕ್ಕಿಲಾಯ.— ಸ್ವಾಮಿ, ಪಬ್ಲಿಕ್ ಸರ್ವೀಸ್ ಕಮಿಷನ್‌ನವರು ಉಪಾಧ್ಯಾಯರನ್ನು ನೇಮಕ ಮಾಡುವುದಕ್ಕಾಗಿ ಇಂಟರ್‌ವ್ಯೂ ಕರೆದು ಕೆಲವು ಅಭ್ಯರ್ಥಿಗಳನ್ನು ಆಯ್ಕೆ ಮಾಡಿದ್ದಾರೆ. ಹಾಗೆ ಆಯ್ಕೆ ಮಾಡಿದ ಅಭ್ಯರ್ಥಿಗಳ ಪಟ್ಟಿಯನ್ನು ತಯಾರು ಮಾಡಿ ಅವರು ಕಳುಹಿಸಿಲ್ಲ. ಅವರಿಗೆ ಪಟ್ಟಿ ಕಳುಹಿಸುವುದಕ್ಕೆ ಏನು ತೊಂದರೆ ಬಂದಿದೆಯೋ ಗೊತ್ತಿಲ್ಲ. ಅವರು ಪಟ್ಟಿ ಕಳುಹಿಸದೇ ಇರುವುದರಿಂದ ಸ್ಪೆಷಲ್ ಟೀಚರ್ಸ್‌ನ್ನು ಕೆಲಸಕ್ಕೆ ತೆಗೆದುಕೊಳ್ಳಲಿಲ್ಲ. ಹೀಗಿರುವುದರಿಂದ ಪಬ್ಲಿಕ್ ಸರ್ವೀಸ್ ಕಮಿಷನ್ ನಿಂದ ಪಟ್ಟಿ ಬರುವವರೆಗೆ ಈ ಸ್ಥಳೀಯ ಸ್ಪೆಷಲ್ ಟೀಚರ್ಸ್, ಅವರ ಸ್ಥಾನದಲ್ಲಿ ಕೆಲಸ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಡುತ್ತೀರಾ ?

ಶ್ರೀ ಬಿ. ಸುಬ್ಬಯ್ಯಶೆಟ್ಟಿ.— ಅವರಿಂದ ಪಟ್ಟಿ ಇನ್ನೂ ಬಂದಿಲ್ಲ. ಸ್ಪೆಷಲ್ ಟೀಚರ್ಸ್ ಯಾರು ಯಾರು ಇದ್ದಾರೆ ಅವರಿಗೆ ಅನುಕೂಲ ಮಾಡಿಕೊಡಬೇಕೆಂದು ಹೇಳಿ We are considering the question. That is the position.

ಶ್ರೀ ಬಿ.ವಿ. ಕಕ್ಕಿಲಾಯ.— ಸ್ವಾಮಿ, ಈ ಪೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಪೆಡ್ಯೂಲ್ಡ್ ಟ್ರೈಬ್ಸ್ ಅಭ್ಯರ್ಥಿಗಳಿಗೆ ಇಷ್ಟು ಸೀಟುಗಳನ್ನು ಕಾದಿರಿಸಬೇಕೆಂದು ತಾವು ತಿಳಿಸಿದ್ದೀರಿ. ಅದರ ಪ್ರಕಾರ ಪಬ್ಲಿಕ್ ಸರ್ವೀಸ್ ಕಮಿಷನ್‌ನವರು ಕೆಲವು ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಇಟ್ಟುಕೊಂಡಿದ್ದಾರೆ. ಅದರಲ್ಲಿ ಖಾಲಿ ಇರುವ ಸ್ಥಾನಕ್ಕೆ ಅವರನ್ನು ಬಿಟ್ಟು ಬೇರೆಯವರನ್ನು ತೆಗೆದುಕೊಳ್ಳುವುದಕ್ಕೆ ಬರಂವುದಿಲ್ಲವೆಂಬ ಕಾರಣದಿಂದ ಈ ರೆಕ್ರೂಟ್‌ಮೆಂಟ್‌ನಲ್ಲಿ ತಡವಾಗಿದೆ ಎಂದು ತಿಳಿದು ಬಂದಿದೆ. ತಾವು ಈ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

SRI B. SUBBAYYA SHETTY.— It has not come to the notice of the Government, Sir

## Moodabidri-Belvai Road in S.K.

589. DR. DAMODAR MULKY (Moodabidri). — Will the Minister for Public Works be pleased to state :-

(*a*) when the R.C. (rural communication) road Mooder Mamad-Amandttu Baleyar Pademamad road of Karkal Taluk, Dakshina Kannada was sanctioned ;

(b) what is the length of the road and how much amount is sanctioned for this road ;

(*c*) how much amount is spent so far ;

(*d*) whether the road is completed ?

SRI S. BANGARAPPA (Minister for Public Work).—

(*a*) The correct nomenclature of the road is "Moodabidri Belvai "road to join Daregudde Valapady road" through Ammanottu, Bakimar.

Phase-I of this work was sanctioned during November 1972.
Phase-II was sanctioned during 1977-78.

(b) (1) The length of the road is 8.00 Kms.
(2) The total amount of estimates sanctioned is Rs. 1,96,000.

(*c*) Rs 98,602.

(*d*) No.

ಶ್ರೀ ದಾಮೋದರ ಮುಲ್ಕಿ.— ಸ್ವಾಮಿ, ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದರೆ--ಜೆಲ್ಲಾಯಿಂ ರಸ್ತೆ ಕಾಮಗಾರಿ ಕೆಲಸದ ಮೊದಲನೇ ಹಂತವನ್ನು ೧೯೭೨ನೇ ಇಸವಿಯ ನವೆಂಬರ್ ತಿಂಗಳಲ್ಲಿ ಮುಗಿಸಿದ್ದೇವೆಂದು ಹೇಳಿದ್ದೀರಿ. ಇನ್ನು ಎರಡನೇ ಹಂತದ ಕಾಮಗಾರಿ ಕೆಲಸವನ್ನು ೧೯೭೮ ರವರೆಗೂ ಮಾಡಿಲ್ಲ. ಇದರಲ್ಲಿ ತಡವಾಗಿರುವುದಕ್ಕೆ ಕಾರಣವೇನು ?

†ಶ್ರೀ ಎಸ್. ಬಂಗಾರಪ್ಪ.— ಮೊದಲನೇ ಹಂತದ ಕೆಲಸವನ್ನು ೧೯೭೨ನೇ ಇಸವಿ ನವೆಂಬರ್‌ನಲ್ಲಿ ಮಂಜೂರು ಮಾಡಲಾಗಿದೆ ಎಂಬುದಾಗಿ ಹೇಳಲಾಗಿದೆ. ಮತ್ತು ಎರಡನೇ ಹಂತದ ಕೆಲಸವನ್ನು ೧೯೭೭–೭೮ರ ಅವಧಿಯಲ್ಲಿ ಮಂಜೂರು ಮಾಡಲಾಗಿದೆ ಎಂಬುದಾಗಿ ಹೇಳಲಾಗಿದೆ. ಇದಕ್ಕೆ ಕಾರಣ ನಮಗೆ ಹಣ ಸಿಕ್ಕಿದಾಗ ಹಂತ ಹಂತವಾಗಿ ಕೆಲಸವನ್ನು ತೆಗೆದುಕೊಳ್ಳುತ್ತೇವೆ. ಇದು ಐ.ಸಿ.ಆರ್.ಸಿ. ಪ್ಲೊ ಗ್ರಾಂ ಮೇಲೆ ತೆಗೆದುಕೊಂಡಿರುವ ರಸ್ತೆಯ ಕೆಲಸವಾದ್ದರಿಂದ ಹಂತ ಹಂತವಾಗಿ ಕೆಲಸವನ್ನು ತಗೆದುಕೊಳ್ಳಲಾಗುತ್ತಿದೆ.